# 4th NSA Level Meeting on Trilateral Maritime Security Cooperation

November 26, 2020

## ತ್ರಿಪಕ್ಷೀಯ ಕಡಲ ಭದ್ರತಾ ಸಹಕಾರ ಕುರಿತು ನಾಲ್ಕನೇ ರಾಷ್ಟ್ರೀಯ ಭದ್ರತಾ ಸಲಹಾ ಮಟ್ಟದ ಸಭೆ

ನವೆಂಬರ್ 26, 2020

ಶ್ರೀಲಂಕಾ ಪ್ರಜಾಪ್ರಭುತ್ವವಾದಿ ಸಮಾಜವಾದಿ ಗಣರಾಜ್ಯದ ರಕ್ಷಣಾ ಸಚಿವಾಲಯದ ಕಾರ್ಯದರ್ಶಿ ಶ್ರೇಷ್ಠ ಮೇಜ್ ಜನರಲ್ (ನಿವೃತ್ತ) ಕಮಲ್ ಗುಣರತ್ನ ರವರ ಆಹ್ವಾನದ ಮೇರೆಗೆ 27-28 ನವೆಂಬರ್ 2020 ರಂದು ರಾಷ್ಟ್ರೀಯ ಭದ್ರತಾ ಸಲಹೆಗಾರರಾದ ಶ್ರೀ ಅಜಿತ್ ದೋವಲ್ ರವರು ಶ್ರೀಲಂಕಾ ಆಯೋಜಿಸಿದ್ದ ತ್ರಿಪಕ್ಷೀಯ ಕಡಲ ಭದ್ರತಾ ಸಹಕಾರದ ನಾಲ್ಕನೇ ರಾಷ್ಟ್ರೀಯ ಭದ್ರತಾ ಸಲಹಾ ಮಟ್ಟದ ಸಭೆಯಲ್ಲಿ ಪಾಲ್ಗೊಳ್ಳಲು ಕೊಲಂಬೊಗೆ ಭೇಟಿ ನೀಡಲಿದ್ದಾರೆ.

2. ಈ ಮೊದಲು 2011 ರಲ್ಲಿ ಮಾಲ್ಡೀವ್ಸ್ ನಲ್ಲಿ, 2013 ರಲ್ಲಿ ಶ್ರೀಲಂಕಾದಲ್ಲಿ ಮತ್ತು 2014 ರಲ್ಲಿ ಭಾರತದಲ್ಲಿ ಸಭೆಗಳು ನಡೆದವು. ರಾಷ್ಟ್ರೀಯ ಭದ್ರತಾ ಸಲಹೆಗಾರ ಮಟ್ಟದ ತ್ರಿಪಕ್ಷೀಯ ಸಭೆ ಹಿಂದೂ ಮಹಾಸಾಗರದ ದೇಶಗಳ ನಡುವಿನ ಸಹಕಾರಕ್ಕಾಗಿ ಪರಿಣಾಮಕಾರಿ ವೇದಿಕೆಯಾಗಿ ಕಾರ್ಯನಿರ್ವಹಿಸಿದೆ. ಮೂರನೇ ಸಭೆಯಲ್ಲಿ ಮಾರಿಷಸ್ ಮತ್ತು ಸೀಶೆಲ್ಸ್ ಅತಿಥಿ ರಾಷ್ಟ್ರಗಳಾಗಿ ಭಾಗವಹಿಸಿದ್ದರು.

3. ಶ್ರೀಲಂಕಾದ ರಕ್ಷಣಾ ಕಾರ್ಯದರ್ಶಿ ಮತ್ತು ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರರಾದ ಶ್ರೀ ಅಜಿತ್ ದೋವಲ್ ರವರಲ್ಲದೆ, ರಕ್ಷಣಾ ಸಚಿವ ಶ್ರೇಷ್ಠ ಮಾರಿಯಾ ದೀದಿ ಮಾಲ್ಡೀವ್ಸ್ ಅನ್ನು ಪ್ರತಿನಿಧಿಸಲಿದ್ದಾರೆ.

4. ಹಿಂದೂ ಮಹಾಸಾಗರ ಪ್ರದೇಶದಲ್ಲಿನ ಕಡಲ ಸುರಕ್ಷತೆಯ ಸಹಕಾರಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಈ ಸಭೆ ಅವಕಾಶ ನೀಡುತ್ತದೆ.

5. ತ್ರಿಪಕ್ಷೀಯ ಸಭೆಯಲ್ಲಿ, ರಾಷ್ಟ್ರೀಯ ಭದ್ರತಾ ಸಲಹೆಗಾರ ಇತರ ಉನ್ನತ ಮಟ್ಟದ ದ್ವಿಪಕ್ಷೀಯ ಮಾತುಕತೆಗಳಲ್ಲಿ ಭಾಗವಹಿಸಲಿದ್ದಾರೆ.

**ನವ ದೆಹಲಿ**
**ನವೆಂಬರ್ 26, 2020**

DISCLAIMER: This is an approximate translation. The original is available in English on MEA's website and may be referred to as the official press release.